ಈಚೆಗೆ ಗೇಬ್ರಿಯಲ್ ಗಾರ್ಸಿಯಾ ಮಾರ್ಕ್ವೆಸ್‌ನ 'ಲವ್ ಇನ್ ದಿ ಟೈಮ್ ಆಫ್ ಕಾಲರಾ' ಓದುತ್ತಿದ್ದಾಗ ಥಟ್ಟನೆ ನನ್ನ ಬಾಲ್ಯದ ಚಡ್ಡಿಗೆಳೆಯ ಸೂರಿಯ ನೆನಪಾಯಿತು. ಪ್ರೇಮ ಒಂದು ಬಹುಮುಖೀ ವಜ್ರ. ಅದಕ್ಕೆ ದೇಶ ಕಾಲಗಳ ಕಟ್ಟಿಲ್ಲ. ಕೊಲಂಬಿಯಾವೇನು, ಕರ್ನಾಟಕವೇನು, ಎಲ್ಲೆಂದರಲ್ಲಿ ಅದು ಸಿಗಬಹುದು. ಆದರೆ ಅದು ಸಿಗುವುದು ಪುಣ್ಯವಿದ್ದವರಿಗೆ ಮಾತ್ರ. ಅಂತಹ ಪುಣ್ಯವಂತರಲ್ಲಿ ನಮ್ಮ ಸೂರಿಯೂ ಒಬ್ಬ.

ಪ್ರೇಮ ಬಹುಮುಖೀ ವಜ್ರವೆಂದೆ. ಎಲ್ಲರಿಗೂ ಅದರ ಎಲ್ಲ ಮುಖಗಳೂ ಕಾಣಿಸುವುದಿಲ್ಲ. ಒಬ್ಬೊಬ್ಬರಿಗೆ ಒಂದೊಂದು ಮುಖವಾದರೆ ಸೂರಿ ಕಂಡದ್ದು ಇನ್ನೊಂದು. ಕಂಡ ಆ ಒಂದು ಮುಖದಲ್ಲಿಯೇ ಅವರವರ ಇರವು, ಸಾವು.

ಸೂರಿಯ ಊರು ಒಂದು ಐತಿಹಾಸಿಕ ಸ್ಥಳ. ಶತಮಾನಗಳ ಹಿಂದೆ ಹೈದರಾಲಿ ಮೈಸೂರು ದೊರೆಗಳಿಂದ ಅದನ್ನು ಲಪಟಾಯಿಸಿ, ಅವನೂ ಅವನ ಮಗ ಟಿಪ್ಪು ಅದನ್ನು ಪ್ರಸಿದ್ಧಿಗೆ ತಂದರು. ಆ ಅಪ್ಪ ಮಕ್ಕಳು ತಮ್ಮ ಧೈರ್ಯ, ಚಾಣಾಕ್ಷತನಗಳಿಂದ ಬ್ರಿಟಿಷರನ್ನು ಒಳಗೆ ಕಾಲಿಡದಂತೆ ತಡೆದಿಟ್ಟಿದ್ದರು. ಕೊನೆಗೆ ಭಾರತದ ಅನೇಕ ಪ್ರಾಂತಗಳು ಬಿದ್ದ ಮೇಲೆ ಈ ಊರು ಅವರಿಗೆ ವಶವಾಯಿತು. ಊರಿನ ನದಿ, ಅರಮನೆ, ಉದ್ಯಾನ, ಸೆರೆಮನೆಗಳು, ಸ್ಮಾರಕಗಳು ಹೊರಗಿನವರಿಗಷ್ಟೇ ಆಕರ್ಷಣೆ. ದಿನವೂ ಅವುಗಳ ಬಗ್ಗೆ ಮಾತಾಡಿ ಬೇಸತ್ತಿದ್ದ ಊರ ಜನರ ಪಾಲಿಗೆ ಅದು ಹಳಸು. ಅವರಿಗೆ ಊರಲ್ಲಿದ್ದ ಆಕರ್ಷಣೆಯೇ ಬೇರೆ!

ಮೈಸೂರು – ಬೆಂಗಳೂರು ನಡುವೆ ಇದ್ದ ಆ ಊರಿನಲ್ಲಿ ದಿನಕ್ಕೆರಡು ಸಲ ಒಂದೇ ಗೊತ್ತಾದ ಹೊತ್ತಿಗೆ ಎರಡೂ ಕಡೆಯಿಂದ ಬರುತ್ತಿದ್ದ ರೈಲುಗಳು ಸಂಧಿಸುತ್ತಿದ್ದುದು ಊರಿನ ವಿಶೇಷ. ಮಧ್ಯಾಹ್ನ ಹನ್ನೆರಡು ಗಂಟೆ, ಸಂಜೆ ಏಳು ಗಂಟೆ, ರೈಲು ಗಾಡಿಗಳ ಈ ಎರಡು ಸಂಧಿಸಮಯ ಸೂರ್ಯಾಸ್ತಗಳಂತೆ ಊರಿನವರ ಎಲ್ಲ ವ್ಯವಹಾರಗಳನ್ನೂ ನಿಯಂತ್ರಿಸುತ್ತಿದ್ದವು. ಜನರ ಬದುಕು ಈ ರೈಲುಗಳ ಚಕ್ರದ ಸುತ್ತ ಸುತ್ತುತ್ತಿತ್ತು.

ರೈಲುಗಾಡಿಗಳು ತಮ್ಮ ಪಾಡಿಗೆ ತಾವು ಬಂದು ಹೋಗುತ್ತಿದ್ದರೆ ಅದರಲ್ಲಿ ವಿಶೇಷ ಏನಿರುತ್ತಿತ್ತು? ವಿಶೇಷವೆಂದರೆ ಊರಿನ ಬಹುಪಾಲು ಜನ ಎರಡೂ ವೇಳೆ ಅವು ಬರುವುದನ್ನೇ ಕಾಯುತ್ತ ಸ್ಟೇಷನ್ನಿನಲ್ಲಿ ಡ್ಯೂಟಿ ಹಾಕುತ್ತಿದ್ದದ್ದು. ಅವರಲ್ಲಿ ಪ್ರಯಾಣಿಕರಾಗಿ ಬಂದವರು ಬೆರಳೆಣಿಕೆಯಷ್ಟು, ಉಳಿದವರಿಗೆ ಅವರವರದೇ ಕಾರಣಗಳಿರುತ್ತಿದ್ದವು.

ಹಗಲ ಹನ್ನೆರಡಕ್ಕೆ ಬರುತ್ತಿದ್ದ ಗಾಡಿಗಳು ಆ ದಿನದ 'ಹಿಂದೂ', 'ತಾಯಿನಾಡು', ವಾರಕ್ಕೊಮ್ಮೆ 'ಇಲಸ್ಟ್ರೇಟಡ್ ವೀಕ್ಲಿ'. 'ಪ್ರಜಾಮತ', ತಿಂಗಳಿಗೊಮ್ಮೆ 'ಕತೆಗಾರ', 'ಕಥಾಂಜಲಿ'ಗಳನ್ನು ತರುತ್ತಿದ್ದವು. ಊರಲ್ಲಿ ಒಂದೆರಡು ರೇಡಿಯೊ ಸಹ ಇಲ್ಲದ ಆ ಕಾಲದಲ್ಲಿ ಹೊರಗಿನ ಪ್ರಪಂಚದೊಂದಿಗೆ ಇದ್ದ ಒಂದೇ ಒಂದು ಸಂಪರ್ಕ ಸಾಧನವೆಂದರೆ ಈ ಪತ್ರಿಕೆಗಳು. ಜೊತೆಗೆ ಬೆಂಗಳೂರು, ಮದ್ರಾಸುಗಳಲ್ಲಿ ನಡೆಯುವ ರೇಸುಗಳ ಹಸಿರು–ಹಳದಿ ರಟ್ಟಿನ ಗೈಡ್‌ಬುಕ್‌ಗಳು ಬರುತ್ತಿದ್ದವು. ದಿನದ ಟಪಾಲು ಸಹ ಬರುತ್ತಿದ್ದವು. ಊರಿನ ನಾಲ್ಕಾರು ದೊಡ್ಡ ಅಂಗಡಿಯವರು ಡಬ್ಬಗಳಲ್ಲಿ ಹೊಸ ಹೊಸ ಬ್ರಾಂಡ್ ಸಾಬೂನು, ಹೇರ್ ಆಯಿಲ್, ಬ್ಲೇಡ್, ಚಾಕಲೇಟುಗಳನ್ನು ತಂದು ಅಲ್ಲಿನ ನಾಗರಿಕತೆಯನ್ನು ಬೆಳೆಸುತ್ತಿದ್ದರು.

ಸ್ಟೇಷನ್ನಿಗೆ ಬರುತ್ತಿದ್ದ ಶ್ರೀಮಂತ ಪಡ್ಡೇ ಹುಡುಗರು ಗೋಲ್ಡ್‌ಸ್ಟ್ಯಾಂಡರ್ಡ್ ಷರಟಿನ ಮೇಲೆ ಫಿನ್ಲೆಪಂಚೆ ಕಟ್ಟಿ ಬಿಸಿಲೊ ಮಳೆಯೊ ಸರ್ಜ್‌ಕೋಟ್ ಏರಿಸಿ ತಲೆಗೆ ವಾಸನೆ ಎಣ್ಣೆಚಟ್ಟಿಕೊಂಡು ನೀಟಾಗಿ ಬೈತಲೆ ತೆಗೆದು ಬಾಚಿ, ಒಂದು ಫರ್ಲಾಂಗಿನಷ್ಟು ಉದ್ದವಿರುತ್ತಿದ್ದ ರೈಲಿನ ಡಬ್ಬಗಳ ಮುಂದೆ ಯಾರನ್ನೋ ಹುಡುಕುವವರಂತೆ ಠಳಾಯಿಸುತ್ತಿದ್ದರು. ಫಸ್ಟ್‌ಕ್ಲಾಸ್ ಡಬ್ಬಗಳಲ್ಲಿ ಒಬ್ಬಿಬ್ಬ